# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಗೃಹ ಪರಿಚಾರಕ ಭತ್ಯೆಯನ್ನು ಹೆಚ್ಚಿಸುವ ಬಗ್ಗೆ.

ಓದಲಾಗಿದೆ:
1. ಸರ್ಕಾರಿ ಆದೇಶ ಸಂ: ಸಿಆಸುಇ 232 ಸಿಸೇನಿ 2011, ದಿನಾಂಕ: 22.10.2011.
2. ಸರ್ಕಾರಿ ಆದೇಶ ಸಂ: ಸಿಆಸುಇ 232 ಸಿಸೇನಿ 2011, ದಿನಾಂಕ: 28.01.2012.
3. ಸರ್ಕಾರಿ ಆದೇಶ ಸಂ: ಸಿಆಸುಇ 329 ಸಿಸೇನಿ 2013, ದಿನಾಂಕ: 14.05.2014.
4. ಸರ್ಕಾರಿ ಆದೇಶ ಸಂ: ಸಿಆಸುಇ 329 ಸಿಸೇನಿ 2013, ದಿನಾಂಕ: 18.07.2014.
5. ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 373 ಸಿಸೇನಿ 2015 ದಿನಾಂಕ:05.08.2016
6. ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 226 ಸಿಸೇನಿ 2016 ದಿನಾಂಕ:19.12.2016

**ಪ್ರಸ್ತಾವನೆ:**

ಮೇಲೆ(1)ರಿಂದ (6)ರವರೆಗೆ ಓದಲಾದ ಸರ್ಕಾರದ ಆದೇಶ ಹಾಗೂ ಅಧಿಕೃತ ಜ್ಞಾಪನಗಳಲ್ಲಿ ಸರ್ಕಾರದ ವಿವಿಧ ವರ್ಗದ ಅಧಿಕಾರಿಗಳಿಗೆ ಗೃಹ ಪರಿಚಾರಕ ಭತ್ಯೆಯನ್ನು ನಿಗದಿಗೊಳಿಸಲಾಗಿದೆ. ಗೃಹ ಪರಿಚಾರಕ ಭತ್ಯೆಯನ್ನು ಪರಿಷ್ಕರಿಸಲು ಮನವಿಗಳು ಸ್ವೀಕೃತವಾಗಿರುವ ಹಿನ್ನೆಲೆಯಲ್ಲಿ ಪ್ರಸ್ತಾವನೆಯನ್ನು ಪರಿಶೀಲಿಸಿ ಸದರಿ ಗೃಹ ಪರಿಚಾರಕ ಭತ್ಯೆಯನ್ನು ವಿವಿಧ ವರ್ಗದ ಅಧಿಕಾರಿಗಳಿಗೆ ಪರಿಷ್ಕರಿಸಲು/ಹೆಚ್ಚಿಸಲು ಸರ್ಕಾರವು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಿದೆ.

## ಸರ್ಕಾರದ ಆದೇಶ ಸಂ:ಸಿಆಸುಇ 326 ಸಿಸೇನಿ 2016, ಬೆಂಗಳೂರು ದಿನಾಂಕ:20.07.2017.

ಸರ್ಕಾರದ ವಿವಿಧ ವರ್ಗದ ಅಧಿಕಾರಿಗಳಿಗೆ ನೀಡುತ್ತಿರುವ ಗೃಹ ಪರಿಚಾರಕ ಭತ್ಯೆಯ ದರಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಈ ಕೆಳಗಿನಂತೆ ಹೆಚ್ಚಿಸಲು ಸರ್ಕಾರವು ಮಂಜೂರಾತಿ ನೀಡಿದೆ.

### 1.ಕರ್ನಾಟಕ ಸರ್ಕಾರ ಸಚಿವಾಲಯ:

| ಕ್ರ ಸಂ. | ಅಧಿಕಾರಿ ವರ್ಗ | ಹೆಚ್ಚಿಸಿದ ಗೃಹ ಪರಿಚಾರಕ ಭತ್ಯೆ |
|---|---|---|
| 1 | ಸರ್ಕಾರದ ಮುಖ್ಯ ಕಾರ್ಯದರ್ಶಿಯವರು/ ಅಪರ ಮುಖ್ಯ ಕಾರ್ಯದರ್ಶಿಗಳು | ಮಾಸಿಕ ರೂ.14,000/- |
| 2 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು | ಮಾಸಿಕ ರೂ.10,500/- |
| 3 | ಸರ್ಕಾರದ ಕಾರ್ಯದರ್ಶಿಗಳು | ಮಾಸಿಕ ರೂ.8,750/- |
| 4 | ಸರ್ಕಾರದ ವಿಶೇಷ ಕಾರ್ಯದರ್ಶಿಗಳು/ ಅಪರ ಕಾರ್ಯದರ್ಶಿಗಳು | ಮಾಸಿಕ ರೂ. 5250/- |

| | | |
|---|---|---|
| 5 | (i)ಸರ್ಕಾರದ ಉಪ ಕಾರ್ಯದರ್ಶಿ, (ಸಿಆಸುಇ-ಸೇವೆಗಳು)<br>(ii)ಸರ್ಕಾರದ ಉಪ ಕಾರ್ಯದರ್ಶಿ, (ಬಿ&ಆರ್.) ಆರ್ಥಿಕ ಇಲಾಖೆ.<br>(iii)ಸರ್ಕಾರದ ಉಪ ಕಾರ್ಯದರ್ಶಿ, (ಸಿಆಸುಇ-ಜಾಗೃತ ವಿಭಾಗ) | ಮಾಸಿಕ ರೂ.5,250/- |
| 6 | ಅಡಿಷನಲ್ ಮಿಷನ್ ಡೈರೆಕ್ಟರ್, ಸಕಾಲ ಮಿಷನ್ | ಮಾಸಿಕ ರೂ.5,250/- |
| 7 | ಪ್ರಾಜೆಕ್ಟ್ ಡೈರೆಕ್ಟರ್, ಖಜಾನೆ-2, ಆರ್ಥಿಕ ಇಲಾಖೆ. | ಮಾಸಿಕ ರೂ.5,250/- |
| 8 | ಸರ್ಕಾರದ ಜಂಟಿ ಕಾರ್ಯದರ್ಶಿಗಳು/ ಉಪ ಕಾರ್ಯದರ್ಶಿಗಳು | ಮಾಸಿಕ ರೂ.3,500/- |
| 9 | ಹಿರಿಯ ಆಪ್ತ ಕಾರ್ಯದರ್ಶಿಗಳು/ ಆಪ್ತ ಕಾರ್ಯದರ್ಶಿಗಳು(ಗ್ರೇಡ್-1) | ಮಾಸಿಕ ರೂ.3,500/- |

**2.ಇಲಾಖಾ ಮುಖ್ಯಸ್ಥರು:**

| ಕ್ರ ಸಂ. | ಅಧಿಕಾರಿ ವರ್ಗ | ಹೆಚ್ಚಿಸಿದ ಗೃಹ ಪರಿಚಾರಕ ಭತ್ಯೆ |
|---|---|---|
| 1 | ಇಲಾಖಾ ಮುಖ್ಯಸ್ಥರು | ಮಾಸಿಕ ರೂ.5,250/- |

ಅಧಿಕಾರಿಗಳ ನಿವಾಸಕ್ಕೆ ಕಛೇರಿಯಿಂದ ಗೃಹಪರಿಚಾರಕರನ್ನು ಒದಗಿಸದಿದ್ದಲ್ಲಿ ಮಾತ್ರ ಈ ಭತ್ಯೆಯನ್ನು ನೀಡಲಾಗುವುದು. ಈ ಭತ್ಯೆಯನ್ನು ಮಂಜೂರು ಮಾಡಲು ಈ ಹಿಂದೆ ಉಲ್ಲೇಖ-(5)ರ ಅಧಿಕೃತ ಜ್ಞಾಪನದಲ್ಲಿ ವಿಧಿಸಿರುವ ಷರತ್ತುಗಳು ಮುಂದುವರೆದು ಅನ್ವಯಿಸುತ್ತವೆ. ಅವುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

---3

ಈ ಆದೇಶವನ್ನು ಟಿಪ್ಪಣಿ ಸಂಖ್ಯೆ:ಆಇ 36 ಎಸ್ಆರ್‌ಪಿ 2017 ದಿನಾಂಕ:10.07.2017 ರಲ್ಲಿ ಆರ್ಥಿಕ ಇಲಾಖೆಯು ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

Janaki YR 20/7/17
(ವೈ.ಆರ್.ಜಾನಕಿ)
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ)
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಆಡಳಿತ-3) ☎: 22032274

ಸಂಕಲನಾಧಿಕಾರಿ, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ಮುಂದಿನ ಸಂಚಿಕೆಯಲ್ಲಿ ಪ್ರಕಟಗೊಳಿಸಲು ಹಾಗೂ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಡಳಿತ-ಇ) ಶಾಖೆಗೆ 400 ಪ್ರತಿಗಳನ್ನು ಕಳುಹಿಸಲು ಕೋರಿದೆ.

<u>ಇವರಿಗೆ:</u>

1) ಮಹಾಲೇಖಪಾಲರು, ಲೆಕ್ಕಗಳು/ಲೆಕ್ಕಪರಿಶೋಧನೆ, ಕರ್ನಾಟಕ, ಬೆಂಗಳೂರು.
2) ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು
3) ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳಿಗೆ
4) ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ/ಅಪರ/ವಿಶೇಷ ಕಾರ್ಯದರ್ಶಿಗಳಿಗೆ
5) ಎಲ್ಲಾ ಇಲಾಖಾ ಮುಖ್ಯಸ್ಥರುಗಳಿಗೆ,
6) ಎಲ್ಲಾ ಜಿಲ್ಲಾಧಿಕಾರಿಗಳು,
7) ಎಲ್ಲಾ ಜಿಲ್ಲೆಗಳ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಣಾ ಅಧಿಕಾರಿಗಳು,
8) ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ, ಬೆಂಗಳೂರು.
9) ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್, ಬೆಂಗಳೂರು
10) ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು.
11) ಸರ್ಕಾರದ ಅಧೀನ ಕಾರ್ಯದರ್ಶಿ, ಸಿಆಸುಇ (ಲೆಕ್ಕಪತ್ರ) ಶಾಖೆ.
12) ಸರ್ಕಾರದ ಉಪ ಕಾರ್ಯದರ್ಶಿ, ಆರ್ಥಿಕ ಇಲಾಖೆ (ಸೇವೆಗಳು-2)
13) ಆದೇಶ ಕಡತ /ಹೆಚ್ಚುವರಿ ಪ್ರತಿಗಳು.